Action against Sub-Inspector of Police, Shirva Police Station

412 SRI VASANTH V. SALIAN (Kaup).—Will the Minister for Home be pleased to state.

a) Whether it has come to the notice of Government that the PSI of Shirva Police Station, harassing poor farmers, Harijans, Ladies and poor tenants.

b) If so, what are the reasons for not taking action against him so far.

c) Will the Government would initiate action against the concerned at least now ?

SRI B. RACHAIAH (Minister for Home).—

a) No.

b) and (c) Does not arise in view of reply to clause 'A' above.

ಶ್ರೀ ವಸಂತ ವಿ. ಸಾಲ್ಯಾನ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಮಂತ್ರಿಗಳು ಉತ್ತರ ಹೇಳಿ ಪಾಗ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ. ಸನ್ಮಾನ್ಯ ಮಂತ್ರಿಗಳು ಇದರ ಬಗ್ಗೆ ತಾರೀಖು ೨೧-೧೧-೮೯ರಲ್ಲಿ ಪತ್ರ ಬರೆದಿದ್ದರು, ನಂತರ ೫-೧-೯೬ಕ್ಕೆ ಇನ್ನೊಂದು ಪತ್ರ ಬರೆದಿದ್ದರು, ತಾರೀಖು ೬-೧-೯೬ರಲ್ಲಿ ಒಂದು ಪತ್ರ ಬರೆದಿದ್ದರು, ನಂತರ ೯-೧-೯೬ರಲ್ಲಿ ಒಂದು ಪತ್ರ ಬರೆದಿದ್ದರು, ಹಾಗೂ ೨೪-೧-೯೬ರಲ್ಲಿ ಒಂದು ಪತ್ರ ಬರೆದು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ಈ ರೀತಿ ೬-೭ ಪತ್ರಗಳನ್ನು ನನಗೆ ಬರೆದಿದ್ದಾರೆ. ಆದರೆ ಈಗ ಈ ವಿಚಾರ ಸರ್ಕಾರದ ಗಮನಕ್ಕೆ ಬರಲಿಲ್ಲ ಎಂದು ಹೇಳಿದರೆ ನನಗೆ ವಿಷಾದವಾಗುತ್ತದೆ. ೨೯-೧೨-೯೫ ರಂದು ಆದಿತ್ಯವಾರ ೧೦ ಗಂಟೆಗೆ ಡಿ.ಸಿ. ಆಫೀಸಿನಲ್ಲಿ ಕೆಲಸ ಮಾಡುವಂಥ ಹರಿಜನ ಮಹಿಳೆಗೆ, ಮತ್ತು ತಾಲ್ಲೂಕು ಆಫೀಸಿನಲ್ಲಿ ಕೆಲಸ ಮಾಡುವಂಥ ಮಂತ್ರೊಬ್ಬ ಹರಿಜನ ಮಹಿಳೆ.....

SRI B. BASAVALINGAPPA.—I don't like the hon.member using the words "Harijan Mahile", I would request the hon. members not t use the word 'Harijan',

ಅಧ್ಯಕ್ಷರು.—ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ವಸಂತ ವಿ. ಸಾಲ್ಯಾನ್.—ದಿನಾಂಕ ೨೯-೧೨-೯೫ರಂದು ೧೦ ಗಂಟೆಗೆ ಪರಿಶಿಷ್ಟ ಜಾತಿಯ ಕೆಲವು ಮಹಿಳೆಯರನ್ನು ಮತ್ತು ಕೆಲವು ವಿದ್ಯಾರ್ಥಿಗಳನ್ನು ಸರ್ ಇನ್ಸ್‌ಪೆಕ್ಟರ್‌ರವರು ಅರೆಸ್ಟ್ ಮಾಡಿದರು. ನಂತರ ದೊಡ್ಡ ಅಧಿಕಾರಿಯವರು ಅವರನ್ನು ಬಿಡಿಸಲಿಕ್ಕೆ ಹೋದರೂ ಬಿಡಲಿಲ್ಲ. ೫ ಗಂಟೆಗೆ ನಾನೇ ಸ್ವತಃ ಹೋಗಿ ಫಾರಂನಲ್ಲಿ ಸೈನ್ ಮಾಡಿ ಅವರನ್ನು ಬಿಡಿಸಿದೆ. ಅದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.—ಈ ಪ್ರಕರಣಗಳನ್ನೆಲ್ಲಾ ಸಿ.ಪಿ.ಐ.ಗೆ ವಹಿಸಿದ್ದೇವೆ.

ಶ್ರೀ ವಸಂತ ವಿ. ಸಾಲ್ಯಾನ್.—ಮೊದಲು ಸರ್ಕಾರದ ಗಮನಕ್ಕೆ ಬರಲಿಲ್ಲವೆಂದು ಸಚಿವರು ಹೇಳಿದರು. ನಂತರ ೧೮ ಪತ್ರಗಳನ್ನು ಅವರಿಗೆ ತೋರಿಸಿದಾಗ, ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದರು. ಯಾವಾಗ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ರಾಚಯ್ಯ.—ಇದನ್ನು ಸಿ.ಪಿ.ಐ. ನವರು ವಿಚಾರಣೆ ನಡೆಸುತ್ತಿದ್ದಾರೆ. ಅರ್ಜಿದಾರರಿಗೆ ಸರ್ ಇನ್ಸ್‌ಪೆಕ್ಟರ್‌ರವರು ಕಿರುಕುಳ ಕೊಟ್ಟಿಲ್ಲವೆಂದು ಕಂಡುಬಂದುದರಿಂದ, ಕೊಟ್ಟಿಲ್ಲವೆಂದು ಉತ್ತರ ಕೊಟ್ಟಿದ್ದೇನೆ.